ದಿಃ 5.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ವಿ ವಕೀಲರಿಂದ ,</u>**

13. ನನ್ನ ತಾಯಿ ಈ ದಾವೆ ಹೂಡಿದ ನಂತರ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ಆಕೆ 2014 ರಲ್ಲಿ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ಆಕೆಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆಕೆ ಈ ದಾವೆ ಹೂಡಿದ ನಂತರ ಮೃತಪಟ್ಟಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ 4 ನೇ ಪ್ರತಿವಾದಿ ನನ್ನ ತಂಗಿ. ನನ್ನ ಕುಟುಂಬದ ಎಲ್ಲಾ ಸದಸ್ಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿ ಸದರಿ ಸಂಗತಿ ನಮ್ಮ ವಕೀಲರಿಗೆ ತಿಳಿದಿರುತ್ತದೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಯಾವುದೇ ಸದಸ್ಯರನ್ನು ಈ ದಾವೆಯಿಂದ ಹೊರಗೆ ಇಟ್ಟಿಲ್ಲ ಎಂದರೆ ಸರಿ. ನಮ್ಮ ಒಟ್ಟು ಕುಟುಂಬದ ಎಲ್ಲಾ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತಾರೆ ಎಂದರೆ ಸಾಕ್ಷಿ ನಾಗತಿಬೆಳಗಲು ಗ್ರಾಮದ ಸರ್ವೆ ನಂ. 136, 137 ಹಾಗೂ 138 ರ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಸ್ವತ್ತುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

14. ನಿಡಿ-2 ರಿಂದ ನಿಡಿ-35 ದಾಖಲೆಗಳು ನನ್ನ ಸ್ವಾಧೀನದಲ್ಲಿ ಇದ್ದವು ಎಂದರೆ ಸರಿ. ಸದರಿ ದಾಖಲೆಗಳು ಒಟ್ಟು ಕುಟಂಬದ ಸ್ವತ್ತುಗಳು ಹಾಗೂ ಕುಟುಂಬದ ಆದಾಯದಿಂದ ನನ್ನ ಹೆಸರಿಗೆ ಖರೀದಿಸಿದ ಸ್ವತ್ತುಗಳ ಸಂಬಂಧ ಆಗಿರುತ್ತವೆ ಎಂದರೆ ಸಾಕ್ಷಿ ಕೆಲವು ಸ್ವತ್ತುಗಳನ್ನು ನಾನು ಸ್ವಂತವಾಗಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳನ್ನು ನನ್ನ ತಾಯಿ ಹಾಗೂ ನನ್ನ ಹೆಸರಿಗೆ ಮಾತ್ರ ಖರೀದಿಸಲಾಗಿದೆ ಎಂದರೆ ಸಾಕ್ಷಿ ಪ್ರತಿವಾದಿ 3 ಹಾಗೂ 5 ರವರ ಹೆಸರಿಗೂ ಸಹ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿ ಮುಂದುವರೆದು, ಪ್ರತಿವಾದಿ 3 ಹಾಗೂ 5 ರವರ ಹೆಸರಿಗೆ ಒಟ್ಟು ಕುಟುಂಬದ ಪರವಾಗಿ ಸ್ವತ್ತುಗಳನ್ನು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ನನಗೆ ತಿಳಿದಿಲ್ಲ.

15. ನಿಡಿ-12 ಹಾಗೂ ನಿಡಿ-13 ರಶೀದಿಗಳನ್ನು ಯಾರು ಬರೆದಿರುತ್ತಾರೆ ನನಗೆ ತಿಳಿದಿಲ್ಲ. ನಿಡಿ-12 ಹಾಗೂ ನಿಡಿ-13 ನ್ನು ಈ ಪ್ರಕರಣಕ್ಕಾಗಿ ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-12 ಹಾಗೂ ನಿಡಿ-13 ರ ಸಾಕ್ಷಿದಾರರ ಸಹಿಗಳನ್ನು ಸಹ ನಾನೇ ನಕಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-30 ಹಾಗೂ ನಿಡಿ-31 ರಲ್ಲಿ ಒಳಗೊಂಡ ಸ್ವತ್ತುಗಳು ನನ್ನ ತಂದೆಯ ಹೆಸರಿಗೆ ಇರುತ್ತವೆ ಎಂದರೆ ಸರಿ. ನಿಡಿ-2 ರಿಂದ ನಿಡಿ-35 ನ್ನು ಈ ದಾವೆಗಾಗಿ ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಬ್ಯಾಂಕ್ ಸಾಲದ ಅರ್ಜಿ ಹಾಗೂ ಆ ಸಂಬಂಧ ಇತರೆ ದಾಖಲೆಗಳ ದೃಡಿಕೃತ ನಕಲನ್ನು ತೋರಿಸಿ ತಾನು ಹಾಗೂ ತನ್ನ ತಂದೆ ಬ್ಯಾಂಕಿನಲ್ಲಿ ದಾವಾ ಸ್ವತ್ತುಗಳ ಆಧಾರದ ಮೇಲೆ ಸಾಲ ಪಡೆದಿರುತ್ತೇವೆ ಎಂದು ಸೂಚಿಸಲಾಗಿ ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಸದರಿ ಸಾಲವನ್ನು ತನ್ನ ತಂದೆ ಪಡೆದಿರುತ್ತಾರೆ ಎಂದು ಒಪ್ಪಿಕೊಂಡಿದ್ದು, ಸದರಿ ದಾಖಲೆಗಳನ್ನು ಅಡ್ಡಲಾಗಿ ನಿಪಿ-29 ರಿಂದ ನಿಪಿ-43 ಎಂದು ಗುರುತಿಸಲಾಯಿತು. ಸದರಿ ಸಾಲವನ್ನು ನಾನೇ ಪಡೆದಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಸಂಬಂಧ ಬ್ಯಾಂಕಿನವರು ನನ್ನ ವಿರುದ್ಧ ಸಹ ದಾವೆ ಹೂಡಿ ಡಿಕ್ರಿ ಪಡೆದಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಸದರಿ ಡಿಕ್ರಿ ಆಧಾರದ ಮೇಲೆ ಈಗಲೂ ನ್ಯಾಯಾಲಯದಲ್ಲಿ ಅಮಲ್ಜಾರಿ ಅರ್ಜಿ ಬಾಕಿ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ. ಸದರಿ ಪ್ರಕರಣದಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ಪ್ರಕರಣ ನಡೆಸುತ್ತಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-19 ಹಾಗೂ 20 ರ ಬರವಣಿಗೆ ನನ್ನದಾಗಿರುತ್ತದೆ ಎಂದರೆ ಸರಿ.

16. ನಿಡಿ-19, 20 ಹಾಗೂ ನಿಡಿ-12 ಹಾಗೂ 13 ರ ಬರವಣಿಗೆಗಳು ಒಂದೇ ಆಗಿರುತ್ತವೆ ಎಂದರೆ ಸರಿಯಲ್ಲ. ವಾದಿಗೆ ಪಾಲು ನೀಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ದಾಖಲೆಗಳನ್ನು ಹಾಜರಪಡಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳಲ್ಲಿನ ಅಂಶದಲ್ಲಿ ನಿಜಾಂಶ ಇಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ-7 ರವರ ಪರ ವಕೀಲರು ಸಮಯವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

***(ಟಿ.ಶ್ರೀಕಾಂತ್)***
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**